

ಸೊಳ್ಳೆಯೊಂದು ತನ್ನ ಬದುಕನ್ನು ಯೋಜಿಸುತ್ತಿದೆ.

ನಾಳೆ ಅವಳ ಪಾಲಿಗೆ ತೆವಳಿಕೊಂಡೇ ಬಂತು. ಈ ಮೂರು ದಿನಗಳು ಅವಳ ಪಾಲಿಗೆ ಯುಗದಂತಿದ್ದವು. ಅವಳಿಗೇ ಅಚ್ಚರಿ ಆಗುವಷ್ಟು ಅವಳು ಅವನನ್ನು ಪ್ರೀತಿಸುತ್ತಿದ್ದಳು.

ಮಾರನೇ ದಿನ ರಾತ್ರಿ ಅವನಿಂದ ಮೆಸೇಜ್. 'ಅಡ್ಮಿಟೆಡ್, ಡೆಂಗ್ಯು ಪಾಸಿಟಿವ್. ಪ್ಲೇಟ್‌ಲೆಟ್ಸ್ ಇನ್ ಇಟ್ಸ್ ಲೀಸ್ಟ್.'

ಆ ಮೆಸೇಜ್‌ನಲ್ಲಿ ಅಷ್ಟೇ ಇದ್ದದ್ದು. ಪಲ್ಲವಿ ಭೂಮಿಗಿಳಿದು ಹೋದಳು. ಯಾರಿಗೋ ಜ್ವರ, ಡೆಂಗ್ಯೂ, ಇನ್ನೊಂದು... ಏನೂ ಅನ್ನಿಸುತ್ತಿರಲಿಲ್ಲ. ಡೆಂಗ್ಯೂ ಬಹಳ ಬೇಗ ಗುಣವಾಗುವ ಜ್ವರ ಎನ್ನುವುದೂ ಗೊತ್ತಿತ್ತು. ಆದರೀಗ ಜ್ವರಕ್ಕೆ ತುತ್ತಾಗಿರುವುದು ಅವಳ ಪ್ರೀತಿ.

ಅವಳ ಬದುಕಿನಲ್ಲಿ ರಾಮ್ ಬೆಸೆದುಹೋಗಿದ್ದ. ಅವನಿಲ್ಲದೇ ಅತಂತ್ರವಾದಂತೆ ನೊಂದುಹೋಗಿದ್ದಾಳೆ ಇವಳು. ಪ್ರೀತಿಯೇ ಹಾಗೆ. ಪರಸ್ಪರ ಅವಲಂಬನೆ ಹೆಚ್ಚಾದಷ್ಟೂ ಇಬ್ಬರಲ್ಲೂ ಆತ್ಮವಿಶ್ವಾಸ, ಚೆಲುವು, ಬದುಕಿನೆಡೆಗೆ ಭರವಸೆ!

'ನೋಡಬೇಕನ್ನಿಸ್ತಿದೆ ನಿನ್ನ.' ಆ ರಾತ್ರಿ ಸೋತು ಮೆಸೇಜಿಸಿದ್ದಳು ಪಲ್ಲವಿ.

ಅವನು ಇತ್ತೀಚೆಗೊಮ್ಮೆ ಹೇಳಿದ್ದ. 'ಸಾಹೇಬಾ. ಅಮ್ಮಿಯನ್ನ ಒಪ್ಪಿಸೋದು ನಿಧಾನವಾಗುತ್ತೆ. ಆದರೆ ಒಪ್ತಾರೆ ಅನ್ನುವ ಭರವಸೆ ಇದೆ. ತಂಗಿಯ ಮದುವೆಯೂ ಮುಂದೆ ಇರೋದ್ರಿಂದ ಅಮ್ಮಿ ಭಯ ಪಡ್ತಾಳೆ. ಅವಸರಿಸಬೇಡ. ಸಮಯ ಕೊಡು.'

ನೋಡಬೇಕು ಎನ್ನುವ ಭಾವ ಅವಳಲ್ಲಿ ಅದೆಷ್ಟು ತೀವ್ರವಾಗತೊಡಗಿತೆಂದರೆ ತನ್ನನ್ನು ತಾನು ಯಾವ ರೀತಿಯಲ್ಲೂ ಸಂಭಾಳಿಸಲಾಗದಷ್ಟು.

ರಾಮ್ ನಡುರಾತ್ರಿ ಉತ್ತರಿಸಿದ್ದ – 'ಅಮ್ಮಿ ಕಾಲ ಬಳಿ ಕುಳಿತು ಅಳ್ತಿದ್ದಾಳೆ. ಪ್ಲೇಟ್‌ಲೆಟ್‌ಗಳ ಕೌಂಟು ಪೂರ್ತಿ ಇಳಿದುಹೋಗಿದೆ. ಟೈಪಿಸಲು ಕಷ್ಟವಾಗುತ್ತಿದೆ. ತಂಗಿ ಆಸ್ಪತ್ರೆಯ ಈ ಕೋಣೆಯ ಹೊರಗಡೆಯಿಂದ ನನ್ನನ್ನೇ ನೋಡುತ್ತಿದ್ದಾಳೆ. ನನಗೆ ಸಾವಿನ ದರ್ಶನವಾಗುತ್ತಿದೆ. ನನ್ನೊಳಗೊಂದು ವಿಪ್ಲವವೆದ್ದಿದೆ. ವಿವರಿಸಲಾರೆ. ಮೌನಬಯಸುತ್ತೇನೆ. ಸಹಕರಿಸು.'

ಉಡುಗಿಹೋಯಿತು ಉಸಿರು. ಒಳಗಿನ ಧ್ವನಿಯೊಂದು ಅವನಿಗೆ ಜ್ವರ ಬಂದ ದಿನವೇ ಅವಳಿಗೆ ಈ ದಿನದ ಸುಳಿವು ನೀಡಿತ್ತು. ಆದರೆ ತನ್ನ ಅತೀ ಪ್ರೀತಿ ಹೀಗೆ ಅನಿಸುವಂತೆ ಮಾಡಿದೆ ಎಂದುಕೊಂಡಿದ್ದಳು ಪಲ್ಲವಿ.

ಮೊಳೆತಿದ್ದ ಕತ್ತಲಬೀಜ ಎರಡೆಲೆಯಾಗಿ ಶರವೇಗದಲ್ಲಿ ಮರವಾಗಿ ತನ್ನ ಕತ್ತಲನ್ನು ಅವಳ ಸುತ್ತೆಲ್ಲ ಹರಡಿ ಬೆಳಕಿನೊಂದೆಳೆಯೂ ಬಾರದಂತೆ ಸಲಹ ಹತ್ತಿತು.

ಹೌದು. ಪ್ರೀತಿ ಎನ್ನುವುದೊಂದು ಚಕ್ರವ್ಯೂಹ. ಇದರೊಳಗೆ ಪ್ರಾಮಾಣಿಕವಾಗಿ ಬಿದ್ದವರು ಹೊರಬರಲು ಸಾಧ್ಯವೇ ಇಲ್ಲ.

ಪಲ್ಲವಿ ದಿನೇದಿನೇ ಮತ್ತದೇ ಹಳೆಯ ಮೌನವನ್ನೇ ಹೊದೆಯತೊಡಗಿದಳು. ಮತ್ತೊಮ್ಮೆ ಪ್ರಯತ್ನಿಸಿ ನೋಡುವ ಆಸೆ ನಿತ್ಯ ಅವಳಲ್ಲಿ. ಆದರೆ ಅವನ 'ಸಹಕರಿಸು' ಪದದೊಳಗಿದ್ದ ತಣ್ಣನೆಯ ಭಾವ ಅವಳನ್ನು ತಡೆಯುತ್ತಿತ್ತು.

ಅದೊಂದು ಸಂಜೆ 'ಕ್ಷಮಿಸು' ಅಂತಷ್ಟೇ ಮೆಸೇಜು ಬಂತು. ಪಲ್ಲವಿ ಕುಸಿದು ಬಿದ್ದಳು.

ನಿಭಾಯಿಸಲಾಗದವ ನನ್ನ ಮೌನದ ಜೊತೆಗೆ ಯುದ್ಧ ಮಾಡಿ ನನ್ನನ್ನು ಪಡೆದದ್ದೇಕೆ? ವಿರೋಧಿಸಿದರೂ ಬಿಡದೆ ಭಾವಗಳ ಪೊರೆದದ್ದೇಕೆ? ಏನಾಗುತ್ತಿದೆ ತನ್ನ ಬಾಳಿನಲ್ಲಿ? ರಾಣಿ ಸಾಹೇಬಾ ಅನ್ನುವ ಅಕ್ಷರಗಳ ಆಪ್ಯಾಯತೆ ಕನಸಲ್ಲ ತಾನೇ?

ಪಲ್ಲವಿಗೆ ತನ್ನ ಸುತ್ತೆಲ್ಲಾ ಸೊಳ್ಳೆಯ ಗುಂಯ್‌ಗುಡುವ ಸದ್ದು ರಣನಾದವಾಗಿ ಕೇಳಿಸತೊಡಗಿತು.

ಬದಲಾದಳು ಮಗಳು ಎನ್ನುವ ಸಂತಸದಲ್ಲಿದ್ದ ಅವಳ ಅಪ್ಪ–ಅಮ್ಮ ಹೀಗೇಕಾದಳು ಎನ್ನುವ ಆತಂಕದಲ್ಲಿ.

ಸುತ್ತೆಲ್ಲಾ ಸೊಳ್ಳೆಯೇ ಹಾರಾಡಿದಂತೆ ಪಲ್ಲವಿ ಆಗಾಗ ಹೊಡೆಯುವವಳ ಹಾಗಾಡುತಿದ್ದಳು. ಅವುಗಳ ರಣಸದ್ದಿಗೆ ಭಯಗೊಂಡು ಕಿವಿಯನ್ನು ಗಟ್ಟಿಯಾಗಿ ಮುಚ್ಚಿಕೊಳುತ್ತಿದ್ದಳು.

ಇನ್ನೊಮ್ಮೆ... ಇನ್ನೊಂದೇ ಬಾರಿ ಪ್ರಯತ್ನಿಸಲೇ?

ಅವನೇ ಹೇಳುವಂತೆ ಬದುಕಿನ ಪ್ರತಿಕ್ಷಣವನ್ನೂ ನಿರ್ಧರಿಸುವುದು ಕಾಲ. ಈ ಗಳಿಗೆಯ ಪರಿಸರ ನಿನ್ನೆ ಕೈಗೊಂಡ ಗಟ್ಟಿ ನಿರ್ಧಾರವನ್ನು ಬದಲಿಸಬಹುದು. ಹೌದು... ಈ ದಿನ ಅವನ ಮನಸ್ಸು ಬದಲಾಗಿರಬಹುದು. ಅವನು ಅವನ ರಾಣಿಸಾಹೇಬಳನ್ನ ಅಷ್ಟು ಸುಲಭವಾಗಿ ದೂರ ಮಾಡಿಕೊಳ್ಳಬಲ್ಲನೇ?

ಇಲ್ಲ... ಸಾಧ್ಯವೇ ಇಲ್ಲ.

'ರಾಮ್... ನನಗೆ ನಿನ್ನ ಹೊರತಾಗಿ ಬದುಕುವುದು ಸಾಧ್ಯವಿಲ್ಲ.'

ಆ ಮೆಸೇಜನ್ನು ಅವನು ಮೂರು ದಿನವಾದರೂ ಓದಲೇ ಇಲ್ಲವೇನೊ ಎಂಬಂತೆ ಅದು ಅವನ ಇನ್‌ಬಾಕ್ಸಿನಲ್ಲೇ ಸತ್ತು ಬದುಕಿತ್ತು.

ಪಲ್ಲವಿಗೆ ಮತ್ತೇನೂ ತೋಚಲಿಲ್ಲ.

ಸುತ್ತಲೂ ಮುತ್ತುವ ಸೊಳ್ಳೆಗಳ ಸದ್ದೂ ಅವಳ ಉಸಿರಾಟವನ್ನು, ಎದೆ ಬಡಿತವನ್ನೂ, ಹೊರಗಿನ ಸದ್ದುಗದ್ದಲವನ್ನೂ, ಉಳಿದೆಲ್ಲವನ್ನೂ ಮೀರಿ ಅತಿಯಾಗತೊಡಗಿತು! ಯಾರೊಂದಿಗೂ ಹೇಳಲಾಗದ, ಅನುಭವಿಸಲಾಗದ ಪಲ್ಲವಿಗೆ ಆಗಾಗ ಕೇಳಿಸುತ್ತಿದ್ದ 'ರಾಣಿಸಾಹೇಬ' ಗುಟುಕುಜೀವ ಕೊಡುತ್ತಿತ್ತು.

ಅದೊಂದು ದಿನ ಮಾತ್ರ, ಸೊಳ್ಳೆಯ ಗುಯ್ಯಗುಡುವ ಸದ್ದು ಉಳಿದೆಲ್ಲವನ್ನೂ ಮೀರಿ ಮೀರಿ... ಕೇಳಿ ಕೇಳಿ... ಕೇಳುತ್ತಲೇ...

***

ಇದೆಂಥ ಶೀರ್ಷಿಕೆ ರಮಝಾನ್, ಇದು?

ಆಸಕ್ತರು ವಿಚಿತ್ರ ಕುತೂಹಲದೊಂದಿಗೆ ಕೇಳಿದ್ದರು. ಹೆಸರು ಕೇಳಿಯೇ ಕುತೂಹಲ ಹುಟ್ಟಿ ಪುಸ್ತಕ ಕೊಳ್ಳುತ್ತಿದ್ದರು. ರಮಝಾನನಿಗೆ ಮಾರುಕಟ್ಟೆ ತಂತ್ರ ತಿಳಿದಿದೆ.

'ಸೊಳ್ಳೆ ಕೊಂದ ಹುಡುಗಿ...'

ಕಥಾಸಂಕಲನವನ್ನು ತನ್ನ ಅಮ್ಮೀಜಾನಿಗೆ ಅರ್ಪಿಸಿದ್ದ ರಮಝಾನ್. ಆ ಸಂಕಲನ ಅವನಿಗೆ ಸಾಕಷ್ಟು ಹೆಸರು ಕೀರ್ತಿ ತಂದುಕೊಟ್ಟಿದೆ. ಅದರೊಳಗಿನ ಪ್ರೇಮಕಥೆಗಳು ಈ ಹಿಂದೆ ಪ್ರೇಮಕಥೆಗಳೇ ಇರಲಿಲ್ಲವೇನೋ ಎನುವಷ್ಟು ತಾಜಾವಾಗಿವೆ ಅಂತ ಹೇಳಲಾಗ್ತಿದೆ.

'ಸೊಳ್ಳೆ ಕೊಂದ ಹುಡುಗಿ'ಯ ಕಥೆಯಂತೂ ಶೀರ್ಷಿಕೆಯಿಂದಲೇ ಕುತೂಹಲ ಹುಟ್ಟಿಸಿ ಕರಗಿ ಕಣ್ಣೀರಾಗುವಂತೆ ಮಾಡುತ್ತದೆ ಅಂತಾರೆ ಓದಿದವರು. ಯುವಪೀಳಿಗೆಯಂತೂ ಅವನ ಕಥೆಗಳಿಗೆ ಹುಚ್ಚರಾಗಿದ್ದಾರೆ. ಅವನ ಕಥಾಸಂಕಲನಕ್ಕೆ ಬಂದ ಮೊದಲ ಪ್ರಶಸ್ತಿಯ ಹಣದಲ್ಲಿ ರಮಝಾನ್ ತನ್ನ ಪ್ರೀತಿಯ ಪತ್ನಿಯೊಡನೆ ಅನಾಥಾಶ್ರಮದಲ್ಲಿ ಒಂದಿಡೀ ದಿನವಿದ್ದು ಅನಾಥರಿಗೆ ಊಟ ಮಾಡಿ ಬಂದಿದ್ದಾನೆ.

ಮತ್ತಷ್ಟು ಪ್ರಶಸ್ತಿಗಳ ನಿರೀಕ್ಷೆಯೂ ಅವನಿಗಿದೆ.

***

ಕಥೆ ಪೂರ್ತಿಯಾದ ನಿರಾಳತೆಯಲ್ಲಿ ಪಲ್ಲವಿ ಒಂದು ಕ್ಷಣ ಕಣ್ಣು ಮುಚ್ಚಿ ದೀರ್ಘ ಉಸಿರೆಳೆದುಕೊಂಡಳು.

ಎಷ್ಟೋ ವರ್ಷಗಳ ಒಳಗುದಿ ಹೊರಚೆಲ್ಲಿದ ವಿಚಿತ್ರ ಸುಖ. ಮತ್ತೊಮ್ಮೆ ಕೊನೆಯ ಸಾಲುಗಳನ್ನು ಓದಿಕೊಂಡಳು. ಯಾಕೋ ಗಾಬರಿಯೆನಿಸಿತು. ತಾನು ಬದುಕಿರುವುದನ್ನು ದೃಢಪಡಿಸಿಕೊಳ್ಳಲು ಚಿವುಟಿಕೊಂಡಳು.

ಇಲ್ಲ... ತಾನು ಬದುಕಿದ್ದೇನೆ. ಕನ್ನಡಿಯೆದಿರು ನಿಂತು ಪಾದ ನೋಡಿಕೊಂಡಳು. ಸರಿಯಾಗಿಯೇ ಇವೆ. ಹಾಗಿದ್ದರೆ... ಈ ಕಥೆ?

'ಮತ್ತಷ್ಟು ಪ್ರಶಸ್ತಿಗಳ ನಿರೀಕ್ಷೆಯಲ್ಲಿದ್ದಾನೆ ರಮಝಾನ್.'

***

'ಪಲ್ಲವಿ ಪುರುಷೋತ್ತಮ' – ಕಥೆಯ ಕೊನೆಯಲ್ಲಿ ತನ್ನ ಹೆಸರು ಬರೆದುಕೊಂಡಮೇಲೆ ಸಮಾಧಾನವಾಯಿತು ಪಲ್ಲವಿಗೆ.

'ಪುರೂ...'

ತಾನು ಬರೆದ ಕಥೆಗೆ ಎಂದಿನಂತೆ ಮೊದಲ ಓದುಗನಾದ ಪುರುವಿಗೆ ಕಥೆ ಕೊಡಲು ರಾಗವಾಗಿ ದೊಡ್ಡ ಧ್ವನಿಯಲ್ಲಿ ಕೂಗಿದಳು ಪಲ್ಲವಿ.

ಬೆಳಗ್ಗೆ, ತಿಂಡಿ ಮಾಡಿ ಅವಳು ಬರೆಯಲು ಕೂತಿದ್ದು ನೋಡಿ ಅಡುಗೆಮನೆಯ ಉಳಿದ ಕೆಲಸಗಳನ್ನು ನೋಡಿಕೊಳ್ಳಿದ್ದವ, 'ಬಂದೆ ಪಲ್ಲೂ' ಅಂದ.